ಓ.ಎಸ್. ನಂಃ 176/2021

<u>ಪಿಡಬ್ಲ್ಯೂ:2</u>

ದಿನಾಂಕಃ 25.06.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಬಿ.ಕೆ.ಎಸ್ ವಕೀಲರಿಂದಃ</u>

1. ನಿಪಿ.3 ಮತ್ತು 4 ರ ವಿಲುನಾಮೆ ಬರೆದ ದಿನದಂದು ಕಾವೇರಮ್ಮರವರು ಒಟ್ಟು 2 ದಾಖಲೆಗಳನ್ನು ಬರೆಸಿರುತ್ತಾರೆ. ನಿಪಿ.3 ಮತ್ತು 4 ರ ದಾಖಲೆಗಳನ್ನು ಬರೆದಾಗ ಸಂಜೆ 5 ಗಂಟೆ ಆಗಿತ್ತು. ನಿಪಿ.3 ಮತ್ತು 4 ರ ವೀಲುನಾಮೆಗೆ ಸಾಕ್ಷಿದಾರನಾಗಿ ಸಹಿ ಮಾಡಲು ನನ್ನನ್ನು ಕಾವೇರಮ್ಮನವರೇ ಕರೆದುಕೊಂಡು ಹೋಗಿರುತ್ತಾರೆ.

2. ನಾನು ಸಾಲಿಗ್ರಾಮದಲ್ಲಿ ವಾಸವಿದ್ದೇನೆ. ನಾನು ಮಿರ್ಲೆ ಸಬ್ ರೆಜಿಸ್ಟಾರ್ ಕಚೇರಿಯಲ್ಲಿ ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದು, ಕಾವೇರಮ್ಮನವರು ನನ್ನನ್ನು ಪರಿಚಯಸ್ಥರಾಗಿರುವುದರಿಂದ ಅವರು ನನ್ನ ಬಳಿ ಬಂದು ದಾಖಲೆಗೆ ಸಾಕ್ಷಿದಾರನಾಗಿ ಸಹಿ ಮಾಡಲು ಕರೆದ ಕಾರಣ ನಾನು ಅವರ ಜೊತೆ ಹೋಗಿರುತ್ತೇನೆ. ನಾನು ದಸ್ತಾವೇಜು ಬರೆಯಲು ಅಧಿಕೃತವಾಗಿ ಸರಕಾರದಿಂದ ಪರವಾನಿಗೆಯನ್ನು ಪಡೆದಿರುತ್ತೇನೆ. ನಿಪಿ.3 ಮತ್ತು 4 ರ ದಾಖಲೆಗಳಲ್ಲಿ ನಾನು ಕೇವಲ ಸಾಕ್ಷಿದಾರನಾಗಿ ಸಹಿ ಮಾಡಿರುವುದರಿಂದ ನನ್ನ ಪರವಾನಿಗೆ ಸಂಖ್ಯೆಯನ್ನು ಬರೆದಿರುವುದಿಲ್ಲ.

3. ಸುಮಾರು 15 ವರ್ಷಗಳಿಂದ ನನಗೆ ಕಾವೇರಮ್ಮನ ಪರಿಚಯವಿದೆ. ಕಾವೇರಮ್ಮನ ಗಂಡನ ಹೆಸರು ನಂಜುಂಡಶೆಟ್ಟಿ ಅಂತ ಇರುತ್ತದೆ. ಸದರಿ ನಂಜುಂಡಶೆಟ್ಟಿರವರಿಗೆ ಎಷ್ಟು ಜನ ಹೆಂಡತಿಯರು ಇದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಕಾವೇರಮ್ಮರವರು ನಂಜುಂಡಶೆಟ್ಟಿ ರವರ ಎಷ್ಟನೇ ಹೆಂಡತಿಯಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.3 ಮತ್ತು 4 ರ ದಾಖಲೆಗಳನ್ನು ಎಸ್.ಕೆ.ರಾಮೇಗೌಡರವರು ಬರೆದಿರುತ್ತಾರೆ. ನಿಪಿ.3 ಮತ್ತು 4 ರ ದಾಖೆಗಳನ್ನು ಸದರಿ ಎಸ್.ಕೆ.ರಾಮೇಗೌಡರು ತಮ್ಮ ಕಚೇರಿಯಲ್ಲಿಯೇ ತಯಾರಿಸಿಕೊಂಡು ಬಂದಿದ್ದು, ಸಬ್ ರೆಜಿಸ್ಟ್ರಾರ್ ಕಚೇರಿಯಲ್ಲಿ ನಾನು ನನ್ನ ಸಹಿಯನ್ನು ನಿಪಿ.3 ಮತ್ತು 4 ರ ದಾಖಲೆಗಳಿಗೆ ಹಾಕಿರುತ್ತೇನೆ.

4. ನಿಪಿ.3 ರಡಿಯಲ್ಲಿ ರದ್ದು ಮಾಡಿದ ಹಳೆಯ ವೀಲು ನಾಮೆಯನ್ನು ನನಗೆ ತೋರಿಸಿರುತ್ತಾರೆ. ನಿಪಿ.3 ರಡಿಯಲ್ಲಿ ರದ್ದು ಮಾಡಿದ ಹಳೆಯ ವೀಲು ನಾಮೆ ಯಾವ ಆಸ್ತಿಗೆ

ಸಂಬಂದಪಟ್ಟ ವೀಲು ನಾಮೆ ಆಗಿತ್ತು ಎಂದು ನನಗೆ ಗೊತ್ತಿಲ್ಲ, ಆದರೆ ಸದರಿ ಹಳೆಯ ವೀಲು ನಾಮೆ 1 ನೇ ಪ್ರತಿವಾದಿಯ ಹೆಸರಿಗೆ ಮಾಡಿದ ವೀಲು ನಾಮೆಯಾಗಿತ್ತು. ನಿಪಿ.3 ಮತ್ತು 4 ರ ದಾಖಲೆಗಳಲ್ಲಿ ನಮೂದಿಸಿರುವ ಆಸ್ತಿಯ ಕಂದಾಯ ದಾಖಲೆಗಳನ್ನು ನಾನು ನೋಡಿರುತ್ತೇನೋ ಇಲ್ಲವೋ ನನಗೆ ಈಗ ನೆನಪಿಲ್ಲ. ಕಾವೇರಮ್ಮರವರಿಗೆ ನಿಪಿ.3 ಮತ್ತು 4 ರ ದಾಖಲೆಗಳನ್ನು ಮಾಡಲು ಯಾವುದೇ ಅಧಿಕಾರ ಇಲ್ಲದಿದ್ದರೂ ಸಹ ನಾನು 1 ನೇ ವಾದಿಯ ಗಂಡನ ಜೊತೆಗೆ ಶಾಮೀಲಾಗಿ ಮೋಸದಿಂದ ನಿಪಿ.3 ಮತ್ತು 4 ರ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

5. ನಿಪಿ.3 ಮತ್ತು 4 ರ ದಾಖಲೆಗಳನ್ನು ಮಾಡಿದ ದಿನದಂದು ಕಾವೇರಮ್ಮರವರು ಆರೋಗ್ಯವಂತರಾಗಿದ್ದರು ಹಾಗೂ ಅವರ ಆರೋಗ್ಯ ಸ್ಥಿತಿ ಚೆನ್ನಾಗಿತ್ತು. ಕಾವೇರಮ್ಮರವರು ಮಿರ್ಲೆ ಗ್ರಾಮದ ಮಾರಿಗುಡಿ ರಸ್ತೆಯ ಬಳಿ ವಾಸವಿದ್ದರು. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ. ಕಾವೇರಮ್ಮರವರು ಬೆಂಗಳೂರಿನ ರಾಮಮೂರ್ತಿ ನಗರದ ಅಪ್ಪಾರವ ಲೇಔಟ್ ನಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ.

6. ಕಾವೇರಮ್ಮರವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.3 ಮತ್ತು 4 ರ ದಾಖಲೆ ಆಗುವ ಕಾಲಕ್ಕೆ ಕಾವೇರಮ್ಮರವರ ಆರೋಗ್ಯ ಸ್ಥಿತಿ ಚೆನ್ನಾಗಿರಲಿಲ್ಲ ಮತ್ತು ನಿಪಿ.3 ಮತ್ತು 4 ರ ದಾಖಲೆಗಳನ್ನು ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ವಾದಿಯ ಗಂಡನಾದ ಡಿ.ಎಸ್.ಸುಂದರ್ ರವರೊಂದಿಗೆ ಶಾಮೀಲಾಗಿ ಸುಳ್ಳಾಗಿ ನಿಪಿ.3 ಮತ್ತು 4 ರ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :** ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಕೆ.ಆರ್.ನಗರ